ಜನಪ್ರಿಯವಾಗುತ್ತಿದೆ. ಮದುವೆ ಸಮಾರಂಭವನ್ನು ಎಲ್ಲಿ, ಯಾವ ರೀತಿಯಾಗಿ ಆಚರಿಸಿಕೊಳ್ಳಬೇಕು ಎಂಬುದನ್ನು ಎರಡೂ ಕುಟುಂಬ ಚರ್ಚಿಸಿ ತೀರ್ಮಾನಿಸುತ್ತದೆ. ಮದುವೆ ಅದ್ದೂರಿಯೂ ಆಗಿರಬೇಕು, ಹೊಸ ಪರಿಸರ, ಪ್ರವಾಸಿ ತಾಣ, ಹೊಸ ವಾತಾವರಣದಲ್ಲಿ ಆಗಬೇಕು, ಆತ್ಮೀಯರನ್ನು, ಆಪ್ತರನ್ನಷ್ಟೇ ಆಹ್ವಾನಿಸಬೇಕು ಎನ್ನುವವರಿಗೆ ಡೆಸ್ಟಿನೇಷನ್ ಮದುವೆ ಉತ್ತಮ ಆಯ್ಕೆ. ಮನೆ, ಊರಿನಿಂದ ದೂರ ಹೋಗಿ ತಮಗೆ ಇಷ್ಟವಾದ ತಾಣದಲ್ಲಿ ಮದುವೆ ಮಾಡಿಕೊಳ್ಳಬೇಕು ಎಂದು ಬಯಸುವವರಿಗೆ ಡೆಸ್ಟಿನೇಷನ್ ಮದುವೆಯೇ ಸೂಕ್ತ.

ಹಾಗೆ ನೋಡಿದರೆ ಪಾಶ್ಚಾತ್ಯ ದೇಶಗಳಲ್ಲಿ ಡೆಸ್ಟಿನೇಷನ್ ಮದುವೆ ಹೆಚ್ಚು ಚಾಲ್ತಿಯಲ್ಲಿದ್ದು, ಬಹು ಬೇಡಿಕೆಯನ್ನೂ ಗಳಿಸಿದೆ. ನಮ್ಮ ದೇಶದಲ್ಲಿ ಶ್ರೀಮಂತ ವರ್ಗ, ಸಿನಿಮಾ ತಾರೆಯರು ಸೇರಿದಂತೆ ಸೆಲೆಬ್ರಿಟಿಗಳು ಈ ತರಹದ ಮದುವೆಗೆ ಆದ್ಯತೆ ನೀಡಿದ್ದರ ಪರಿಣಾಮ ಈಗೀಗ ಡೆಸ್ಟಿನೇಷನ್ ಮದುವೆಗಳು ಜನಪ್ರಿಯತೆಯ ಹಾದಿ ಹಿಡಿದಿವೆ. ಜೊತೆಗೆ ಶಾಸ್ತ್ರ, ಸಂಪ್ರದಾಯದಂಥ ಮದುವೆಯ ವಿಧಾನದಲ್ಲಿಯೂ ಬದಲಾವಣೆ ಆಗಿದೆ.

ನಮ್ಮ ದೇಶದಲ್ಲಿ ಕೇರಳ, ರಾಜಸ್ಥಾನ, ಗೋವಾ, ದೆಹಲಿಗಳಲ್ಲಿ ಸದ್ಯ ಡೆಸ್ಟಿನೇಷನ್ ಮದುವೆಗಳು ನಡೆಯುತ್ತಿವೆ. ಸೆಲೆಬ್ರಿಟಿಗಳಾದ ದೀಪಿಕಾ ಪಡುಕೋಣೆ– ರಣವೀರ್ ಸಿಂಗ್, ಅನುಷ್ಕಾ ಶರ್ಮ–ವಿರಾಟ್ ಕೊಹ್ಲಿ ಮುಂತಾದವರು ಡೆಸ್ಟಿನೇಷನ್ ಮದುವೆ ಮಾಡಿಕೊಂಡಿರುವುದು ಕೂಡ ಈ ರೀತಿಯ ಮದುವೆಗೆ ಬೇಡಿಕೆ


ವಿವಾಹ ಸಂಭ್ರಮದಲ್ಲಿ ವಧುವರರು

ಹೆಚ್ಚಾಗಲು ಕಾರಣ. ವಿಶ್ವವಿಖ್ಯಾತ ಹಂಪಿ ಕೂಡ ಇದೀಗ ಡೆಸ್ಟಿನೇಷನ್ ಮದುವೆಯ ತಾಣವಾಗಿ ರೂಪುಗೊಂಡಿದೆ. ಇಲ್ಲಿ ಕಲ್ಲು, ಬೆಟ್ಟಗಳ ನಡುವೆ, ಕಣಿವೆಯ ಹಾದಿಯ ಮರೆಗೆ ಟೆಂಟ್ ಹಾಕಿ ಮದುವೆ ಮಾಡಿದರೆ ಅದೇನೋ ಸಂತೋಷ, ಸಂಭ್ರಮ ಮದುವೆಯ ತಾಣದಲ್ಲಿ. ಶಿಮ್ಲಾ, ಉತ್ತರಾಖಂಡಗಳಲ್ಲಿ ತಂಪು ಹವೆಯ ಕಾರಣ ಹಾಗೂ ಪ್ರಕೃತಿಯ ಸೊಬಗಿನ ಕಾರಣವಾಗಿ ಡೆಸ್ಟಿನೇಷನ್ ಮದುವೆಗಳನ್ನು ನಡೆಸಲು ಸೆಲೆಬ್ರಿಟಿಗಳಿಂದ ಹಿಡಿದು ಆಸಕ್ತರು ಮುಂದಾಗಿದ್ದಾರೆ. ಪಿಂಕ್ ಸಿಟಿ ಎನಿಸಿರುವ ರಾಜಸ್ಥಾನದ ಜೈಪುರದಲ್ಲಿ ಡೆಸ್ಟಿನೇಷನ್ ಮದುವೆ ಸಾಕಾರಗೊಳ್ಳುತ್ತಿದೆ. ಕೇರಳದಲ್ಲಿಯೂ ತಂಪು ಹವೆ, ಹಿನ್ನೀರಿನಲ್ಲಿ ದೋಣಿ ವಿಹಾರ ಮಾಡುವ ಅವಕಾಶಗಳೂ ಇಲ್ಲಿ ಸಿಗುವುದರಿಂದ ಕೇರಳ ಕೂಡ ಈ ಮಾದರಿಯ ಮದುವೆಗೆ ಮಣೆಹಾಕುತ್ತಿದೆ. ಜೊತೆಗೆ ವಧುವರರಿಗೆ ಆಕರ್ಷಕ ಫೋಟೊ, ವಿಡಿಯೊಗಳನ್ನು ಇಲ್ಲಿ ಕ್ಲಿಕ್ಕಿಸಿಕೊಂಡು


ಸಂಬಂಧಿಕರ ಸಂಭ್ರಮ